ಕಲ್ಪನೆಯೂ ನನಗಿಲ್ಲ. ನೀನು ಇನ್ಯಾರದೋ ಹೆಂಡತಿಯಾಗುವುದನ್ನು ಊಹಿಸಿಕೊಂಡರೆ ನನ್ನೆದೆ ನಡುಗುತ್ತೆ. ಪ್ಲೀಸ್, ನಿರಾಶೆ ಮಾಡಬೇಡ. ನನ್ನನ್ನು ಮದುವೆಯಾಗುವುದಾಗಿ ಹೇಳು, ವಿಲ್ಯೂ ಮ್ಯಾರಿ ಮಿ' ಎಂದೆ.

'ಆದರೆ... ನಿನಗೆ ವಿಶಾಲ ಕಡಲಲ್ಲಿ ದೋಣಿ ವಿಹಾರ ಮಾಡಬಯಸುವವನಿಗೆ ಒಂದೇ ತೀರದಲ್ಲಿ ಲಂಗರು ಹಾಕಿ ನಿಂತುಕೊಳ್ಳುವ ನಂಬಿಕೆ ಇದೆಯಾ?' ಎಂದಳು ನನ್ನನ್ನೇ ನೋಡುತ್ತ.

'ಕಳೆದ ಒಂದುವರೆ ವರ್ಷದಿಂದ ಸ್ವಚ್ಛಂದ ವಿಹಾರಕ್ಕೆ ಯಾವುದೇ ಅಡೆತಡೆಗಳಿರಲಿಲ್ಲ. ಆದರೂ ನಾನು ನಿನ್ನ ಬಂದರನ್ನು ಬಿಟ್ಟು ಎಲ್ಲೂ ಹೋಗಲಿಲ್ಲ' ಎಂದೆ. 'ಇರಬಹುದು, ಈ ದಿನಗಳಲ್ಲಿ ನೀನು ಹಾಗೆ ಬದುಕಿರಬಹುದು. ಒಮ್ಮೆ ನಾನು ನಿನ್ನ ಕೈಗೆ ಸಿಕ್ಕಿದ ಮೇಲೆ ನಿನ್ನ ಧೋರಣೆ ಬದಲಾದರೆ?! ನಾನು ನಿನ್ನ ಬಳಸಿ ಬಿಸಾಡುವ ಸಂಸ್ಕೃತಿಗೆ ಅಳವಡುವುದಿಲ್ಲವೆಂದು ಹೇಗೆ ಭಾವಿಸಲಿ? ನಿನ್ನನ್ನು ನಂಬುವ ಬಗೆಯಾದರು ಏನು?' ಎಂದಳು. ತೀರ ನಿರಾಶೆಯಾವರಿಸಿತು. ಅಯಾಚಿತವಾಗಿ ಕಣ್ತುಂಬಿಕೊಂಡಿತು. 'ಇಲ್ಲ ಉಮಾಮಣಿ, ನನ್ನ ಇತಿಹಾಸವನ್ನು ನೋಡಿ ಭವಿಷ್ಯವನ್ನು ಅಳೆಯಬೇಡ. ದಯವಿಟ್ಟು ಒಂದು ಅವಕಾಶ... ಒಂದೇ ಒಂದು ಅವಕಾಶ ಕೊಡು. ಬೇಕಾದರೆ... ನಿನಗೆ ನನ್ನ ಮೇಲೆ ನಂಬಿಕೆ ಇಲ್ಲದಿದ್ದರೆ... ನೀನು ನಂಬುವವರೆಗೂ ನಿನಗಾಗಿ ಕಾಯುತ್ತೇನೆ. ಅದೆಷ್ಟೇ ವರ್ಷಗಳಾದರು...' ಮಾತು ಮುಂದುವರೆಸುತ್ತಿದ್ದೆ. ನಡುವೆ ನನ್ನನ್ನು ತಡೆಯುತ್ತಾ 'ನಂಬುತ್ತೇನೆ ಏಕೆಂದರೆ ನಿನ್ನನ್ನು ನಂಬುವ ಅನಿವಾರ್ಯತೆ ನನಗಿದೆ. ನಿನ್ನ ಹೊರತು ಯಾರನ್ನು ನಾನು ನನ್ನವನೆಂದುಕೊಳ್ಳಲು ಆಗಲೇ ಇಲ್ಲ. ನೀನೊಬ್ಬ ಲಂಪಟ, ಸ್ತ್ರೀಬಾಕ, ಕುಟುಂಬಮೌಲ್ಯವಿಲ್ಲದವನು, ಭಾರತೀಯ ಸಂಸ್ಕೃತಿಯ ಗಡಿಯಾಚೆ ಬದುಕುತ್ತಿರುವ ಭಂಡ... ಎಂದೆಲ್ಲಾ ಅನಿಸುತ್ತಿದ್ದರು... ನಿನ್ನನ್ನು ಏಕರೀತಿಯಿಂದ ಪ್ರೀತಿಸದೆ ಇರಲು ನನಗಾಗಲಿಲ್ಲ' ಎಂದಳು.

'ಇಲ್ಲ ಉಮಾಮಣಿ, ನಾನು ಮೊದಲಿನ ಹಾಗೇ ಇಲ್ಲವೇ ಇಲ್ಲ. ಬೇಕಾದರೆ ಯಾರನ್ನಾದರು ವಿಚಾರಿಸು' ಎಂದೆ.

'ಏ ನೋ, ನಾನು ನಿನ್ನನ್ನು ನಿಕಟವಾಗಿ ಗಮನಿಸುತ್ತಲೇ ಬಂದಿದ್ದೇನೆ. ನೀನು ನನ್ನನು ಪ್ರೀತಿಸುತ್ತಿರುವುದು ಕೂಡ ನನ್ನ ಹೃದಯಕ್ಕೆ ತಿಳಿದಿತ್ತು. ನಿನ್ನ ಹಳೆಯ ಚಾಳಿಯ ಅಶಾಂತತೆಯಿಂದ ನೀನು ನನ್ನ ಕಡೆ ಬರುವುದನ್ನೇ ಕಾಯುತ್ತಿದ್ದೆ. ನಾವಿಬ್ಬರು ಉಳಿದ ಇಡೀ ಜೀವನ ಜೊತೆಯಾಗಿರಬೇಕಾದವರು. ಆ ದಿನ ಇಷ್ಟು ಬೇಗ ಬರುತ್ತದೆಂದು ನಾನಂದುಕೊಂಡಿರಲಿಲ್ಲ' ಎಂದಳು ನಗುತ್ತ. ಅವಳ ಮುಖ ತಳೆದ ಧನ್ಯತೆಯ ನಗುವನ್ನು ನನ್ನ ಕಣ್ಣಿನಲ್ಲಿ ಹೀರಿಕೊಳ್ಳುತ್ತಿದ್ದಂತೆಯೇ ಅವಳು ನನ್ನ ಎದೆಗೆ ತಲೆಯನ್ನು ಒರಗಿಸಿದಳು.


**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿರುವ ಗೃಹಿಣಿ. ಅವರ ಮೂರು ಕಾದಂಬರಿಗಳು, ಮೂರು ಕಥಾಸಂಕಲನಗಳು ಹಾಗೂ ಎರಡು ಕವನ ಸಂಕಲನಗಳು ಪ್ರಕಟವಾಗಿವೆ. 'ಮಯೂರ'ವೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ. 'ಪಯಣರಾಗ' ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಹೊರತಂದಿದ್ದಾರೆ. ಅವರ ನಾಟಕ – 'ಕದಳಿ ಕಲ್ಯಾಣ'.